ಮಾತನಾಡುತ್ತೀರಲ್ಲ. ಇದೇನು ವ್ಯವಹಾರವೇ? ಸದನ ನಡೆಸಿಕೊಳ್ಳುವ ರೀತಿಯೇ? ರೀ ಸಚಿವರೆ, ಏನು ಉತ್ತರ ಹೇಳುತ್ತೀರೋ ಹೇಳ್ರಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗ ಬಜೆಟ್‌ನಲ್ಲಿ ಎಷ್ಟಿದೆಯೋ ಅಷ್ಟು ಹಣ ಬಿಡುಗಡೆಯಾಗುತ್ತದೆ, ಅದು ಗ್ಯಾರಂಟಿಯಾಗಿ ಆಗುತ್ತದೆ. ಅದರಲ್ಲಿ ನೀವು ಕೇಳಿರತಕ್ಕಂಥ ದೇವಸ್ಥಾನಗಳಿಗೆ ಹಣ ಕೊಡುವಂಥ ಪ್ರಯತ್ನವನ್ನು ಮಾಡುತ್ತೇನೆ.

ಅಧ್ಯಕ್ಷರು:– ಆಯಿತು ಬಿಡಿ. ಮಾಲೀಕಯ್ಯ ಗುತ್ತೇದಾರ್‌ರವರೆ, ನಿಮ್ಮ ವಿಷಯ ಪ್ರಸ್ತಾಪ ಮಾಡಿ.

2. ವಿಷಯ: ಗುಲ್ಬರ್ಗಾ ಜಿಲ್ಲೆಯಲ್ಲಿ ಮಳೆ ಇಲ್ಲದೆ ಅಫಜಲಪುರ ಸೊನ್ನ ಭೀಮಾ ಏತ ನೀರಾವರಿಯ ಡ್ಯಾಂನಲ್ಲಿ ನೀರು ಇಲ್ಲದೆ ಅಫಜಲಪುರ ಕ್ಷೇತ್ರದ ಜನ/ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿರುತ್ತದೆ. ಆದಕಾರಣ ಮಹಾರಾಷ್ಟ್ರದ ಉಜ್ಜನಿ ಡ್ಯಾಂನಿಂದ ಅಥವಾ ಆಲಮಟ್ಟಿ ಡ್ಯಾಂನಿಂದ ಭೀಮಾ ಏತ ನೀರಾವರಿಯ ಡ್ಯಾಂಗೆ ನೀರು ಬಿಡುವ ಬಗ್ಗೆ.

– – –

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ):– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಮಳೆ ಇಲ್ಲದೆ ಅಫಜಲಪುರ ಸೊನ್ನ ಭೀಮಾ ಏತ ನೀರಾವರಿಯ ಡ್ಯಾಂನಲ್ಲಿ ನೀರು ಇಲ್ಲದೇ ಅಫಜಲಪುರ ಕ್ಷೇತ್ರದ ಜನ/ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿರುವುದರಿಂದ ಮಹಾರಾಷ್ಟ್ರದ ಉಜ್ಜನಿ ಡ್ಯಾಂನಿಂದ ಅಥವಾ ಆಲಮಟ್ಟಿ ಡ್ಯಾಂನಿಂದ ಭೀಮಾ ಏತ ನೀರಾವರಿ ಡ್ಯಾಂಗೆ ನೀರು ಬಿಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು):– ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿರವರು ಕಲಬುರಗಿ ಜಿಲ್ಲೆಯ ಭೀಮಾ ನದಿಯ ಕಣಿವೆ ಪ್ರದೇಶವಾದ ಅಫಜಲಪುರ ಮತ್ತು ಜೇವರ್ಗಿ ತಾಲ್ಲೂಕಿನಲ್ಲಿ ಮುಂಗಾರು ಮಳೆ ಶೇ. 50 ಕ್ಕಿಂತ ಕಡಿಮೆಯಾಗಿರುವುದರಿಂದ ಎಲ್ಲಾ ಅಂತರ್ಜಲ ಮೂಲಗಳು ಬತ್ತಿಹೋಗಿರುವುದರಿಂದ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಮಹಾರಾಷ್ಟ್ರದ ಉಜ್ಜನಿ ಡ್ಯಾಂನಿಂದ ಭೀಮಾ ನದಿಗೆ ನೀರು ಹರಿಸಿದಲ್ಲಿ ಕಲಬುರಗಿ ಜಿಲ್ಲೆಯ ಅಫಜಲಪುರ ಮತ್ತು ಜೇವರ್ಗಿ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬಹುದಾಗಿರುತ್ತದೆ. ಆದಕಾರಣ, ಮಹಾರಾಷ್ಟ್ರದ ಉಜ್ಜನಿ ಡ್ಯಾಂನಿಂದ ಭೀಮಾ ನದಿಗೆ ನೀರು ಬಿಡಿಸಲು ಕ್ರಮಕೈಗೊಳ್ಳಲು ವಿನಂತಿಸಿರುತ್ತಾರೆ.

ಇದೇ ರೀತಿ ಜಿಲ್ಲಾಧಿಕಾರಿಗಳು, ವಿಜಯಪುರ ರವರು ಇಂಡಿ ತಾಲ್ಲೂಕಿನ ಭೀಮಾ ನದಿಯ ಪಕ್ಕದಲ್ಲಿಯ ಸುಮಾರು 36 ಗ್ರಾಮಗಳು ಮತ್ತು ಇಂಡಿ ಪಟ್ಟಣಕ್ಕೆ ಹಾಗೂ 75,000 ಜಾನುವಾರುಗಳಿಗೆ ಕುಡಿಯುವ ನೀರನ್ನು ಪೂರೈಸುತ್ತಿದ್ದ ಭೀಮಾ ನದಿಯು ಸಂಪೂರ್ಣವಾಗಿ ಬತ್ತಿಹೋಗಿರುತ್ತದೆ. ಭೀಮಾ ನದಿ ಪಾತ್ರದ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಪಕ್ಕದ ಮಹಾರಾಷ್ಟ್ರ ರಾಜ್ಯದ ಉಜ್ಜನಿ ಜಲಾಶಯದಿಂದ ನೀರು ಬಿಡುಗಡೆ ಮಾಡುವ ಕುರಿತು ಅವಶ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. ಇಂಡಿ ತಾಲ್ಲೂಕಿನ ಬರಗುಡಿ ಗ್ರಾಮದ ಹತ್ತಿರ ಇರುವ ಜಾಕ್‌ವೆಲ್ ಮೂಲಕ ಭೀಮಾ ನದಿಯಿಂದ ಇಂಡಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ವ್ಯವಸ್ಥೆ ಇರುತ್ತದೆ. ಆದರೆ ಈ ವರ್ಷ ಭೀಮಾ ನದಿಯ ನೀರು ಬತ್ತಿ ಹೋಗಿರುವುದರಿಂದ ಇಂಡಿ ಪಟ್ಟಣಕ್ಕೆ ನೀರು ಸರಬರಾಜು ಮಾಡುವಲ್ಲಿ ತೊಂದರೆಯಾಗಲಿದೆ ಎಂದು ತಿಳಿಸಿರುತ್ತಾರೆ.

ಮಳೆ ಇಲ್ಲದೆ ಬರಗಾಲ ಪೀಡಿತ ಅಫಜಲಪುರ, ಜೇವರ್ಗಿ ಮತ್ತು ಇಂಡಿ ತಾಲ್ಲೂಕುಗಳ ಜನ/ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸಲು ಅನುಕೂಲವಾಗುವಂತೆ ಮಹಾರಾಷ್ಟ್ರದ ಉಜ್ಜನಿ ಜಲಾಶಯದಿಂದ ಭೀಮಾ ನದಿಗೆ 2 ಟಿ.ಎಂ.ಸಿ. ನೀರು ಬಿಡಲು ಮಹಾರಾಷ್ಟ್ರ ಸರ್ಕಾರವನ್ನು ಕೋರಲಾಗುವುದು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ):– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಮಳೆ ಇಲ್ಲದೆ ಅಫಜಲಪುರ ಸೊನ್ನ ಭೀಮಾ ಏತ ನೀರಾವರಿಯ ಡ್ಯಾಂನಲ್ಲಿ ನೀರು ಇಲ್ಲದೆ ಅಫಜಲಪುರ ಕ್ಷೇತ್ರದ ಜನ/ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿರುತ್ತದೆ. ಆದಕಾರಣ ಮಹಾರಾಷ್ಟ್ರದ ಉಜ್ಜನಿ ಡ್ಯಾಂನಿಂದ ಅಥವಾ ಆಲಮಟ್ಟಿ ಡ್ಯಾಂನಿಂದ ಭೀಮಾ ಏತ ನೀರಾವರಿಯ ಡ್ಯಾಂಗೆ ನೀರು ಬಿಡುವ ಬಗ್ಗೆ ಪ್ರಸ್ತಾಪವನ್ನು ಶೂನ್ಯ ವೇಳೆಯಲ್ಲಿ ಮಾಡಿದ್ದೇನೆ. ಇದಕ್ಕೆ ಉತ್ತರ ಬಂದಿದೆ. ಅವರು ಉತ್ತರದಲ್ಲಿ ಇನ್ನೂ ಕೋರಲಾಗುವುದು ಎಂದು ಹೇಳಿದ್ದಾರೆ. ಆದರೆ ಈಗ ಅಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಈ ಕೂಡಲೇ ಡೈರಕ್ಷನ್ ಕೊಟ್ಟು ನೀರು ಬಿಡುವುದಕ್ಕೆ ಜಿಲ್ಲಾಧಿಕಾರಿಗಳ ಮುಖಾಂತರ ಕಳುಹಿಸಬೇಕೆಂದು ನಿಮ್ಮ ಮುಖಾಂತರ ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್ (ಬೃಹತ್ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಿಜಾಪುರ ಮತ್ತು ತಮ್ಮ ಜಿಲ್ಲಾಧಿಕಾರಿಗಳಿಗೂ ಕೇಳಿದ್ದೇವೆ. ಬಿಜಾಪುರ ಜಿಲ್ಲಾಧಿಕಾರಿಗಳು ಈಗಾಗಲೇ ಕೋರಿಕೆಯನ್ನು ಸಲ್ಲಿಸಿದ್ದಾರೆ. ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳ ಹತ್ತಿರ ನಾನು ವೈಯಕ್ತಿಕವಾಗಿ ಇವತ್ತು ಮಾತನಾಡಿದ್ದೇನೆ. ನಾಳೆ ನಾವು ಮಹಾರಾಷ್ಟ್ರ ಸರ್ಕಾರಕ್ಕೆ ಪತ್ರ ಬರೆದು ಮತ್ತು ಸಂಪರ್ಕ ಬೆಳೆಸಿ ನೀರು ಬಿಡುಗಡೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು:– ಈಗ ಆಲಮಟ್ಟಿ ಡ್ಯಾಂನಿಂದ ನೀರು ಬಿಡಬೇಕೆಂದು ಕೇಳಿದ್ದಾರೆ. ನಾನು ಮೊನ್ನೆ ಹೋಗಿದ್ದೆ. ಆಲಮಟ್ಟಿ ಡ್ಯಾಂನಲ್ಲಿ ನೀರು ಭರ್ತಿ ತುಂಬಿದೆಯಲ್ರಿ.

ಶ್ರೀ ಎಂ.ಬಿ. ಪಾಟೀಲ್:– ಮಹಾರಾಷ್ಟ್ರದ ಉಜ್ಜನಿ ಡ್ಯಾಂನಿಂದ ನೀರು ಕೇಳುತ್ತಿದ್ದಾರೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:– ಆಲಮಟ್ಟಿ ಡ್ಯಾಂನಿಂದಲೂ ನೀರನ್ನು ಕೇಳಿದ್ದೇವೆ. ಉಜ್ಜನಿಯಿಂದಲೂ ಕೇಳಿದ್ದೇವೆ. ಈಗ ಆಲಮಟ್ಟಿ ಡ್ಯಾಂನಲ್ಲಿ ಪೂರ್ಣ ನೀರಿರುವುದರಿಂದ ಈಗ ತಾತ್ಕಾಲಿಕವಾಗಿ ಅಲ್ಲಿಂದ ಬಿಡುವುದಕ್ಕೆ ಹೇಳಿ.

ಅಧ್ಯಕ್ಷರು:– ಆಲಮಟ್ಟಿಯಲ್ಲಿ full ನೀರು ಇದೆಯಲ್ಲಾ?

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಎರಡೂ ಕಡೆಯಿಂದಲೂ ನೀರು ಬಿಡಬಹುದು. ಆಲಮಟ್ಟಿಯಿಂದಲೂ ಬಿಡಬಹುದು, ಉಜ್ಜನಿಯಿಂದಲೂ ಬಿಡಬಹುದು. ಮಹಾರಾಷ್ಟ್ರ ಸರ್ಕಾರದವರು ಕೊಡದಿದ್ದರೆ, ಆಲಮಟ್ಟಿಯಿಂದ ಕೊಡುತ್ತೇವೆಂದು ಹೇಳಿ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:– ಉಜ್ಜನಿಯಿಂದ ಬರುವುದಕ್ಕೆ ಮೊದಲು ಆಲಮಟ್ಟಿಯಿಂದ ನೀರು ಬಿಡುವುದಕ್ಕೆ ಹೇಳಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಆಲಮಟ್ಟಿಯಿಂದಲೂ ನೀರು ಬಿಡುವುದಕ್ಕೆ ಸಾಧ್ಯತೆಯಿದ್ದರೆ ಅದನ್ನು ಕೂಡ ನಾವು ಬಿಡುಗಡೆ ಮಾಡುತ್ತೇವೆ.

ಅಧ್ಯಕ್ಷರು:– Ok. Next, ವಿಜಯಾನಂದ ಕಾಶಪ್ಪನವರ, ಅವರು ಇಲ್ಲ. ಈಗ ಶೂನ್ಯ ವೇಳೆ ಮುಕ್ತಾಯವಾಯಿತು.

ಒಬ್ಬ ಮಾನ್ಯ ಸದಸ್ಯರು:– ನಾನು ಮೂರು ದಿನಗಳ ಹಿಂದೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಕೋರಿ ನೋಟಿಸ್ ಕೊಟ್ಟಿದ್ದೆ. ಇನ್ನೂ ನನಗೆ ಪ್ರಸ್ತಾಪಿಸಲು ಅವಕಾಶ ಸಿಕ್ಕಿಲ್ಲ.

ಅಧ್ಯಕ್ಷರು:– ನಾಳೆ ಹಾಕಿಕೊಳ್ಳೋಣ ಬಿಡಿ.